# ಸುದ್ದಿ ಸಂಚಯ

## ಪರಮಪೂಜ್ಯ ಸ್ವಾಮಿ ರಂಗನಾಥಾನಂದಜೀ ಮಹಾರಾಜ್ ಅವರ ಮೈಸೂರು ಭೇಟಿ

**ರಾಮಕೃಷ್ಣ** ಮಠ ಮತ್ತು ರಾಮಕೃಷ್ಣ ಮಿಷನ್ನಿನ ಪರಮಾಧ್ಯಕ್ಷರಾದ ಪರಮಪೂಜ್ಯ ಸ್ವಾಮಿ ರಂಗನಾಥಾನಂದಜಿಯವರ ಹರ್ಷದಾಯಕ ದಿವ್ಯಸಾನ್ನಿಧ್ಯ ಫೆಬ್ರವರಿ ೧೯ರಿಂದ ನಾಲ್ಕುದಿನಗಳವರೆಗೆ ಮೈಸೂರಿನ ರಾಮಕೃಷ್ಣಾಶ್ರಮದ ಭಕ್ತರಿಗೆ ಲಭಿಸಿತ್ತು.


ಪೂಜ್ಯ ಸ್ವಾಮೀಜಿಯವರ *Eternal Values for a Changing Society* ಎಂಬ ನಾಲ್ಕು ಬೃಹತ್ ಸಂಪುಟಗಳ ಇಂಗ್ಲಿಷ್ ಕೃತಿಯ ಕನ್ನಡಾನುವಾದವಾದ 'ಪರಿವರ್ತನಶೀಲ ಸಮಾಜಕ್ಕೆ ಶಾಶ್ವತ ಮೌಲ್ಯಗಳು' ಗ್ರಂಥದ ೨ನೆ ಸಂಪುಟವನ್ನು ಅವರ ದಿವ್ಯಸಾನ್ನಿಧ್ಯದಲ್ಲಿ, ದಿನಾಂಕ ೨೦ ಭಾನುವಾರದಂದು ಸಂಜೆ ೫.೩೦ಕ್ಕೆ ಆಶ್ರಮದ ಸಭಾಂಗಣದಲ್ಲಿ, ಬೆಂಗಳೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ. ಡಿ.ಎಂ. ನಂಜುಡಪ್ಪ ಅವರು ಬಿಡುಗಡೆ ಮಾಡಿದರು. ಪೂಜ್ಯ ಸ್ವಾಮೀಜಿಯವರು ಮಾತನಾಡುತ್ತ ವೇದಾಂತದ ತತ್ತ್ವಗಳನ್ನು ಅಳವಡಿಸಿಕೊಳ್ಳುವುದರಿಂದ ಮಾತ್ರವೇ ಭಾರತದ ಪುನರುತ್ಥಾನ ಸಾಧ್ಯ ಎಂದರು. ಇಂದು ನಮ್ಮೆದುರಿಗೆ ಎರಡು ಭಾರತಗಳಿವೆ, ಒಂದು ಅಮರ ಭಾರತ, ಎರಡನೆಯದು ರೋಗಗ್ರಸ್ತ ಭಾರತ. ಜನತೆ ಭಾರತದ ಆಧ್ಯಾತ್ಮಿಕ ಪರಂಪರೆಯನ್ನು ಮರೆತಿರುವುದರಿಂದ ಭಾರತ ಇಂದು ರೋಗಗ್ರಸ್ತವಾಗಿದೆ. ಸ್ವಾಮಿ ವಿವೇಕಾನಂದರು, ತ್ಯಾಗ ಮತ್ತು ಸೇವೆ ಭಾರತದ ಅವಳಿ ಆದರ್ಶಗಳು ಎಂದು ಹೇಳಿದ್ದಾರೆ. ಆದ್ದರಿಂದ ಅವನ್ನು ಅಳವಡಿಸಿಕೊಂಡು ಈ ರೋಗಗ್ರಸ್ತ ಭಾರತವನ್ನು ಅಮರ ಭಾರತವನ್ನಾಗಿ ಬೆಳೆಸಬೇಕೆಂದು ಪೂಜ್ಯ ಸ್ವಾಮೀಜಿಯವರು ಕರೆ ನೀಡಿದರು.



**ಪರಮಪೂಜ್ಯ ಸ್ವಾಮಿ ರಂಗನಾಥಾನಂದಜಿಯವರು ಆಶೀರ್ವಚನ ನೀಡುತ್ತಿರುವುದು. ಎಡದಿಂದ, ಸ್ವಾಮಿ ಸುರೇಶಾನಂದಜಿ, ಡಾ. ಪ್ರಭುಶಂಕರ, ಡಾ. ಡಿ.ಎಂ. ನಂಜುಂಡಪ್ಪ ಮತ್ತು ಸ್ವಾಮಿ ಆತ್ಮವಿದಾನಂದಜಿ**

ಡಾ. ಡಿ. ಎಂ. ನಂಜುಡಪ್ಪ ಅವರು ಮಾತನಾಡಿ ಭಾರತದಲ್ಲಿ ಮೌಲ್ಯಗಳ ಅಧಃಪತನವಾಗುತ್ತಿರುವ ಇಂತಹ ಸಂದರ್ಭದಲ್ಲಿ ಪೂಜ್ಯ ಸ್ವಾಮೀಜಿಯವರ ಕೃತಿಗಳಲ್ಲಿನ ಚಿಂತನೆಗಳು ನಮಗೆ ಬೇಕಾದ ಮಾರ್ಗದರ್ಶನವನ್ನು ನೀಡುತ್ತವೆ ಎಂದರು.

ಪರಮ ಪೂಜ್ಯ ಸ್ವಾಮೀಜಿಯವರು ಶ್ರೀರಾಮಕೃಷ್ಣ ವಿದ್ಯಾಶಾಲೆಯ ಸುವರ್ಣಮಹೋತ್ಸವ ಕಟ್ಟಡದ ಶಂಕುಸ್ಥಾಪನೆಯನ್ನು ಮಂಗಳವಾರ ಫೆಬ್ರವರಿ ೨೨ರಂದು ನೆರವೇರಿಸಿದರು. ಸಮಾರಂಭದಲ್ಲಿ ಕರ್ನಾಟಕದ ಮುಖ್ಯಮಂತ್ರಿ ಶ್ರೀ ಎಸ್.ಎಂ. ಕೃಷ್ಣ ಅವರು ಅಧ್ಯಕ್ಷತೆ ವಹಿಸಿದ್ದರು. ಪೂಜ್ಯ ಸ್ವಾಮೀಜಿಯವರು ಮಾತನಾಡುತ್ತ ಮೈಸೂರಿನ ಆಶ್ರಮದಲ್ಲಿಯೆ ತಮ್ಮ ಆಧ್ಯಾತ್ಮಿಕ ಜೀವನ ಆರಂಭವಾಗಿದ್ದನ್ನು ನೆನಪಿಸಿಕೊಂಡು ಮೈಸೂರು ನನ್ನ ಆಧ್ಯಾತ್ಮಿಕ ತವರುಮನೆ ಎಂದು ಭಾವಪೂರಿತರಾಗಿ ನುಡಿದರು 'ಭಾರತದ ಸಮಸ್ಯೆಗಳು ಶಿಕ್ಷಣದಿಂದ ಮಾತ್ರ ಪರಿಹರಿಸಲು ಸಾಧ್ಯ ಎಂದು ವಿವೇಕಾನಂದರು ಹೇಳಿದ್ದರು. ಆದರೆ ಈಗಿನ ಶಿಕ್ಷಣ ಅಭಿವೃದ್ಧಿಗೆ ನೆರವಾಗುತ್ತಿಲ್ಲ. ಬದಲಾಗಿ ಕೇವಲ ಸ್ವಾರ್ಥ ಸಾಧನೆಗಳಿಗೆ ಮಾತ್ರ ಉಪಯೋಗವಾಗುತ್ತಿದೆ. ವಿದ್ಯಾವಂತರು ವಿದ್ಯಾವಂತರಲ್ಲದವರಿಗೆ ಶಿಕ್ಷಣ ನೀಡಿದರೆ ಸಾಕ್ಷರತೆ ಸಾಧಿಸುವುದು ಸುಲಭ' ಎಂದು ತಿಳಿಸಿದರು. ನಂತರ ಮಾತನಾಡಿದ ಮಾನ್ಯ ಮುಖ್ಯಮಂತ್ರಿಗಳು ೫೦ ವರ್ಷಗಳ ಹಿಂದೆ ತಾವು ಶ್ರೀರಾಮಕೃಷ್ಣ ವಿದ್ಯಾಶಾಲೆಯ ವಿದ್ಯಾರ್ಥಿಯಾಗಿದ್ದುದನ್ನು ಸ್ಮರಿಸಿಕೊಂಡರು. ಆಗ ಸ್ವಾಮಿ ಶಾಂಭವಾನಂದಜಿ, ಸ್ವಾಮಿ ವೇದಾನಂದಜಿ ಮತ್ತು ಸ್ವಾಮಿ ಸೋಮನಾಥಾನಂದಜಿಯವರ ವ್ಯಕ್ತಿತ್ವ, ಕಾರ್ಯಕುಶಲತೆ ಮತ್ತು ವಿದ್ವತ್ತುಗಳಿಂದ ನಾನು ಪ್ರಭಾವಿತನಾಗಿದ್ದೇನೆ ಎಂದು ನುಡಿದರು. ಕೇವಲ ಶಿಕ್ಷಣ ಕೊಡುವುದು ಇಲ್ಲಿ ಪ್ರಧಾನವಾಗಿಲ್ಲ. ಶಿಕ್ಷಣದ ಜೊತೆಗೆ ವ್ಯಕ್ತಿತ್ವ, ಶಿಸ್ತು, ಅಧ್ಯಾತ್ಮ ಜ್ಞಾನ ಮೂಡಿಸಲು ಈ ಶಾಲೆ ಕಾರಣೀಭೂತವಾಗಿದೆ. ನಾನಾ ಊರು, ಸಾಂಸ್ಕೃತಿಕ ಹಿನ್ನೆಲೆಯಿಂದ ಬಂದ ವಿದ್ಯಾರ್ಥಿಗಳು ತಮ್ಮ ಭವಿಷ್ಯವನ್ನು ಇಲ್ಲಿ ರೂಪಿಸಿಕೊಳ್ಳುತ್ತಿದ್ದಾರೆ ಎಂದು ಅವರು ಶ್ಲಾಘಿಸಿದರು.




ಶಂಕುಸ್ಥಾಪನೆಯ ಸಮಾರಂಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು